# ರುಕ್ಮಿಣಿಗೆ ವಸಂತಕಾಲ!



**ಚಂದನವನದ ಹೊಸ ಪ್ರತಿಭೆ ರುಕ್ಮಿಣಿ ವಸಂತ್, ಅಕಡೆಮಿಕ್ ಆಗಿ ನಟನೆಯನ್ನು ಅಭ್ಯಸಿಸಿದವರು. ಕಥಾಪ್ರಧಾನವಾದ ಸಿನಿಮಾಗಳ ಮೂಲಕ ಗುರ್ತಿಸಿಕೊಳ್ಳುವುದು ಅವರ ಕನಸು.**

■ **ಪದ್ಮನಾಭ ಭಟ್**

‘ಯಾವತ್ತಾದರೂ ಒಂದು ದಿನ ನೀವು ಮಾಡಲೇಬೇಕು ಅಂದುಕೊಂಡಿರುವ ಪಾತ್ರ ಯಾವುದು?’. ಈ ಪ್ರಶ್ನೆಗೆ ಉತ್ತರವಾಗಿ ರುಕ್ಮಿಣಿ ವಸಂತ್, ‘ಸಪ್ತ ಸಾಗರದಾಚೆ ಎಲ್ಲೋ’ ಸಿನಿಮಾದ ಪೋಸ್ಟರ್ ತೋರಿಸಿ ನಕ್ಕರು.

‘ಈ ಸಿನಿಮಾದ ಪೋಸ್ಟರ್ ನೋಡಿದಾಗಲೇ ನಾನು ಎಕ್ಸೈಟ್ ಆಗಿದ್ದೆ. ಈ ಸಿನಿಮಾದ ಭಾಗ ಆಗಲೇಬೇಕು ಎಂದು ಆಸೆಪಟ್ಟಿದ್ದೆ. ನನ್ನ ಕನಸಿನ ಪಾತ್ರದಲ್ಲಿ ನಾನೀಗ ನಟಿಸುತ್ತಿದ್ದೇನೆ’ ಎಂದು ಮತ್ತೊಂದು ಸುಂದರ ನಗುವನ್ನು ಸೂಸಿದರು.

ಹೇಮಂತ್ ರಾವ್ ಮತ್ತು ರಕ್ಷಿತ್ ಶೆಟ್ಟಿ ಕಾಂಬಿನೇಷನ್‌ನಲ್ಲಿ ತಯಾರಾಗುತ್ತಿರುವ ‘ಸಪ್ತ ಸಾಗರದಾಚೆ ಎಲ್ಲೋ’ ಸಿನಿಮಾದ ನಾಯಕಿ ರುಕ್ಮಿಣಿ, ಬೆಂಗಳೂರಿನ ಹುಡುಗಿಯೇ. ‘ನಾನು ಹುಟ್ಟಿದ್ದು ಬೆಂಗಳೂರಿನಲ್ಲಿ. ನನ್ನಮ್ಮ ಭರತನಾಟ್ಯ ಕಲಾವಿದೆ. ಅಪ್ಪ ಸೇನೆಯಲ್ಲಿದ್ದರು. ಹಾಗಾಗಿ ಇಂಡಿಯಾದ ಬೇರೆ ಬೇರೆ ಕಡೆಗಳಲ್ಲಿ ಬೆಳೆದೆ’ ಎನ್ನುವ ರುಕ್ಮಿಣಿಗೆ ಕಲೆಯ ಅಭಿರುಚಿ ಎನ್ನುವುದು ವಂಶಪಾರಂಪರ್ಯವಾಗಿಯೇ ಬಂದಿದ್ದು.

‘ನಮ್ಮ ಮನೆಯಲ್ಲಿ ಯಾವಾಗಲೂ ಪ್ರೋತ್ಸಾಹ ಇತ್ತು. ಆದರೆ ನಟನೆಯ ಕಡೆಗೆ ನನ್ನ ಆಸಕ್ತಿ ಮೊಳೆತಿದ್ದು ಹೈಸ್ಕೂಲ್ ಓದುತ್ತಿದ್ದಾಗ. ಅಲ್ಲಿ ಸಣ್ಣ ಸಣ್ಣ ನಾಟಕಗಳನ್ನು ಮಾಡುತ್ತಿದ್ದೆವು. ಅವುಗಳಲ್ಲಿ ಅಭಿನಯಿಸುತ್ತಿದ್ದೆ. ನನ್ನ ನಟನೆ ನೋಡಿ ಶಿಕ್ಷಕರೆಲ್ಲ ತುಂಬ ಪ್ರೋತ್ಸಾಹ ಕೊಡುತ್ತಿದ್ದರು’ ಎಂದು ನೆನಪಿಸಿಕೊಳ್ಳುವ ರುಕ್ಮಿಣಿ, ನಂತರದ ದಿನಗಳಲ್ಲಿ ಲಂಡನ್‌ನ ‘ರಾಯಲ್ ಅಕಾಡೆಮಿ ಆಫ್ ಡ್ರಮೆಟಿಕ್ ಆ್ಯಕ್ಟ್’ ಸಂಸ್ಥೆಯಲ್ಲಿ ನಟನೆಯನ್ನು ಅಕಾಡೆಮಿಕ್ ಆಗಿ ಕಲಿತರು.

‘ಅಲ್ಲಿ ಇಡೀ ದಿನ ನಟನೆಗೆ ಸಂಬಂಧಿಸಿದ ತರಬೇತಿಯನ್ನೇ ಪಡೆಯುತ್ತಿದ್ದೆ. ಆದರೆ ಅಲ್ಲಿ ಕಲಿಸಿದ್ದೆಲ್ಲವೂ ಪಾಶ್ಚಾತ್ಯ ನಟನಾಸಿದ್ಧಾಂತಗಳು. ನಮ್ಮ ಭಾರತೀಯ ನಟನಾ ಸಿದ್ಧಾಂತಗಳ ಪರಿಚಯ ಅಷ್ಟಾಗಿ ಇರಲಿಲ್ಲ. ಅಲ್ಲಿಂದ ತಿರುಗಿ ಬಂದ ಮೇಲೆ ಅಮ್ಮ, ಮನೆಯಲ್ಲಿಯೇ ಅವುಗಳನ್ನು ಪರಿಚಯ ಮಾಡಿಕೊಟ್ಟಳು. ಈಗ ಆ ಎರಡನ್ನೂ ಬೆರೆಸಿ ನಟನೆಯ ಪ್ರಯೋಗ ಮಾಡುತ್ತಿದ್ದೇನೆ’ ಎಂದು ಪಾಶ್ಚಾತ್ಯ ಪಾಠಗಳೊಡನೆ ಈ ನೆಲದ ಸತ್ವಗಳನ್ನೂ ಕಸಿ ಮಾಡುವ ಕುರಿತು ಹೇಳುತ್ತಾರೆ.

ಶ್ರೀನಿ ನಿರ್ದೇಶನದ ‘ಬೀರ್‌ಬಲ್’ ರುಕ್ಮಿಣಿ ಅವರ ನಟನೆಯ ಮೊದಲ ಸಿನಿಮಾ. ‘ಆ ಸಿನಿಮಾ ನನಗೊಂದು ಪಾಠಶಾಲೆಯ ಹಾಗಿತ್ತು. ಪ್ರತಿದಿನ ಸೆಟ್‌ಗೆ ಹೋಗಿ ಎಲ್ಲರಿಂದಲೂ ಸಾಕಷ್ಟು ವಿಷಯಗಳನ್ನು ತಿಳಿದುಕೊಳ್ಳುತ್ತಿದ್ದೆ. ಹಾಗಾಗಿ ನನ್ನ ನಟನೆಯನ್ನು ನೋಡಿ ಜನರು ಏನೆಂದುಕೊಳ್ಳಬಹುದು ಎಂಬ ಆಲೋಚನೆ ಬರಲೇ ಇಲ್ಲ. ಹಾಗಿದ್ದೂ ಆ ಪಾತ್ರವನ್ನು ಸಾಕಷ್ಟು ಜನ ಮೆಚ್ಚಿಕೊಂಡರು. ಈಗಲೂ ಸಿನಿಮಾ ನೋಡಿ ಮೆಚ್ಚಿ ಪ್ರಶಂಸೆ ಮಾತುಗಳನ್ನು ಹೇಳುತ್ತಿರುತ್ತಾರೆ’ ಎಂದು ಖುಷಿಯಿಂದ ಹೇಳಿಕೊಳ್ಳುತ್ತಾರೆ.

ಈಗ ಹೇಮಂತ್ ರಾವ್ ಜೊತೆಗೆ ಕೆಲಸ ಮಾಡುತ್ತಿರುವುದೂ ಅವರಿಗೆ ಇನ್ನೊಂದು ಪಾಠಶಾಲೆಗೆ ಅಡ್ಮಿಷನ್ ಮಾಡಿಕೊಂಡ ಅನುಭವ ಕೊಡುತ್ತಿದೆ. ‘ಹೇಮಂತ್ ತುಂಬ ಅದ್ಭುತವಾಗಿ ಕಥೆ ಬರೆದಿದ್ದಾರೆ. ಅವರು ಕಥೆಯ ಪಾತ್ರಗಳು ಮತ್ತು ಕಲಾವಿದರು, ಇಬ್ಬರ ಬಗ್ಗೆಯೂ ಅಷ್ಟೇ ಕಾಳಜಿ ತೋರುತ್ತಾರೆ. ಇಡೀ ತಂಡ ಈ ಕಥೆಯನ್ನು ಜನರಿಗೆ ಇನ್ನೂ ಚೆನ್ನಾಗಿ ಹೇಗೆ ಹೇಳಬಹುದು ಎಂದು ಯೋಚಿಸುತ್ತಿರುತ್ತದೆ. ಅಂಥ ತಂಡದ ಭಾಗವಾಗಿರುವುದು ನನ್ನ ಅದೃಷ್ಟ’ ಎಂದು ಖುಷಿಯಿಂದ ಹೇಳಿಕೊಳ್ಳುತ್ತಾರೆ.

‘ಎರಡು ಹಾಡು, ಮೂರು ಫೈಟ್‌ನಲ್ಲಿ ಕಾಣಿಸಿಕೊಳ್ಳುವ ನಾಯಕಿಯಾದರೆ ನನ್ನೊಳಗಿನ ಕಲಾವಿದೆಗೆ ತೃಪ್ತಿ ಸಿಗುವುದಿಲ್ಲವೇನೋ’ ಎಂದು ಅನುಮಾನದಿಂದ ಹೇಳುವ ಅವರು, ‘ಅಂಥ ಪಾತ್ರಗಳನ್ನೂ ಟ್ರೈ ಮಾಡಿ ನೋಡ್ತೇನೆ’ ಎಂದೂ ಹೇಳುತ್ತಾರೆ. ಅವರಿಗೆ ಒಂದು ಸಿನಿಮಾದಲ್ಲಿ ತುಂಬ ಮುಖ್ಯ ಅನಿಸುವುದು ಕಥೆ ಮತ್ತು ಆ ಕಥೆಗೆ ತನ್ನ ಪಾತ್ರ ಎಷ್ಟು ಕೊಡುಗೆ ನೀಡುತ್ತಿದೆ ಎಂಬ ಸಂಗತಿ. ಸದ್ಯ ‘ಸಪ್ತ ಸಾಗರದಾಚೆ ಎಲ್ಲೋ’ ವಿಹರಿಸುತ್ತಿರುವ ರುಕ್ಮಿಣಿ, ಆ ಪ್ರಯಾಣ ಮುಗಿದ ಕೂಡಲೇ ಇನ್ನೊಂದಿಷ್ಟು ಹೊಸ ಸಿನಿಮಾವನ್ನು ಒಪ್ಪಿಕೊಳ್ಳುವ ಉತ್ಸಾಹದಲ್ಲಿದ್ದಾರೆ. ■